ಎಸ್‌ಐಆರ್ ನಿಯಮ ಪಾಲನೆಗೆ ಬಿಜೆಪಿ ನಿಯೋಗ ದೂರು

ಉದಯಕಾಲ ನ್ಯೂಸ್

ಮೈಸೂರು: ಮೈಸೂರಿನ ಚಾಮರಾಜ ಹಾಗೂ ನರಸಿಂಹರಾಜ ಕ್ಷೇತ್ರದ ಕೆಲವು ಬೂತ್‌ಗಳಲ್ಲಿ ವಿಶೇಷ ಮತದಾರರ ಸಮಗ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆಯಲ್ಲಿ ನಿಯಮಪಾಲನೆ ಆಗುತ್ತಿಲ್ಲ ಎಂದು ಬಿಜೆಪಿ ನಿಯೋಗ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿಗೆ ದೂರು ನೀಡಿತು.

ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಶಾಸಕ ಶ್ರೀವತ್ಸ ನೇತೃತ್ವದಲ್ಲಿ ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಚಾಮರಾಜ ವಿಧಾನ ಸಭಾ ಕ್ಷೇತ್ರದ ಮೀನಾ ಬಜಾರ್ ಮಂಡಿಮೊಹಲ್ಲಾದ ವಾರ್ಡ್ ಸಂ.16 ಬೂತ್ 30, 31, 57, ವಾರ್ಡ್ ಸಂಖ್ಯೆ 34ರ ಬೂತ್ ಸಂಖ್ಯೆ 226, 263, 264 ಹಾಗೂ ವಾರ್ಡ್ ಸಂಖ್ಯೆ 38ರ ಬೂತ್ 243, 265ರ ಮತ ಪರಿಷ್ಕರಣೆ ಪ್ರಕ್ರಿಯೆಯನ್ನು ಉದಯಗಿರಿ ಮದೀನ ಮಸೀದಿಯಲ್ಲಿ ಹಾಗೂ ಉದಯಗಿರಿಯ ವಾರ್ಡ್ 16ರ ಮಾಸ್ಕೋ ಮತಗಟ್ಟೆ ಕೇಂದ್ರ ಮತ್ತು 35ನೇ ವಾರ್ಡಿನ ಉರ್ದು ಶಾಲೆ ಸೇರಿ ಇತರೆ ಸಾಮೂಹಿಕ ಸ್ಥಳಗಳಲ್ಲಿ ನಡೆಸುತ್ತಿರುವುದು ಗಮನಕ್ಕೆ ಬಂದಿದೆ ಎಂದು ದೂರಿದರು.

ಜತೆಗೆ 150 ಬೂತ್‌ಗಳಲ್ಲಿ ಬಿಎಲ್‌ಎ 2ಗಳ ಅಹವಾಲು ಆಲಿಸುತ್ತಿಲ್ಲ. ಹೀಗಾಗಿ ಮನೆ ಮನೆಗೆ ತೆರಳಿ ಬಿಎಲ್ ಒಗಳು ಮಾಹಿತಿ ಕಲೆ ಹಾಕಬೇಕು. ಸಾಮೂಹಿಕ ಪ್ರಕ್ರಿಯೆ ನಿಲ್ಲಿಸಬೇಕು. ಬಿಎಲ್‌ಒ 2ಗಳ ಅಹವಾಲು ಆಲಿಸುವ ಕೆಲಸ ಆಗಬೇಕು. 100 ಸೂಕ್ಷ್ಮ ಮತಗಟ್ಟೆಗಳಾಗಿರುವುದರಿಂದ ಸೂಕ್ತ ರೀತಿಯ ಪೊಲೀಸ್ ಬಂದೋಬಸ್ತ್ ಒದಗಿಸಬೇಕು. ಎಸ್‌ಐಆರ್ ಪ್ರಕ್ರಿಯೆಲ್ಲಿ ಪಾಲ್ಗೊಳ್ಳದಿದ್ದರೆ ಗ್ಯಾರಂಟಿ ನಿಲ್ಲಿಸುವುದಾಗಿ ಸುಳ್ಳು ಸುದ್ದಿ ಹರಡುವವರ ವಿರುದ್ಧ ಕ್ರಮ ಜರುಗಿಸಬೇಕು. ನಗರಪಾಲಿಕೆಯಿಂದ ನೀಡಿರುವ ಮರಣ ಪ್ರಮಾಣ ಪತ್ರದ ದಾಖಲಾತಿ ಮತದಾರರನ್ನು ಕೈ ಬಿಡಬೇಕೆಂಬುದು ಇತ್ಯಾದಿ ಬೇಡಿಕೆಗಳನ್ನು ಈಡೇರಿಸುವಂತೆ ಕೋರಿದರು.

ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ ಕೆಲವು ಬೂತ್‌ಗಳಿಗೆ ತೆರಳುವುದಕ್ಕೂ ನಮ್ಮ ಕಾರ್ಯಕರ್ತರಿಗೆ ಬಿಡದ ಬಿಗುವಿನ ವಾತಾವರಣವಿದೆ. ಹೀಗಾಗಿ ಅಂತಹ ಕಡೆಗಳಿಗೆ ಹೆಚ್ಚಿನ ಭದ್ರತೆ ಒದಗಿಸಬೇಕು. ಅಲ್ಲದೆ, ಕೆಲವೆಡೆ ಅರ್ಜಿಗಳನ್ನು ಕಾಂಗ್ರೆಸ್ ಏಜೆಂಟ್‌ಗಳೇ ಮನೆ ಮನೆಗೆ ಹಂಚುತ್ತಿರುವ ವಿಡಿಯೋಗಳಿದ್ದು, ಇದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕೆಂದು ಹೇಳಿದರು. ಗ್ರಾಮಾಂತರ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಶಾಸಕ ಟಿ.ಎಸ್. ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ರಘು ಕೌಟಿಲ್ಯ, ಮಾಜಿ ಮಹಾಪೌರ ಸಂದೇಶ್ ಸ್ವಾಮಿ, ಮಾಜಿ ಮೇಯರ್ ಶಿವಕುಮಾರ್, ನಗರ ವಕ್ತಾರ ಎಂ.ಎ.ಮೋಹನ್, ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆ ಮಾಜಿ ಅಧ್ಯಕ್ಷ ಪಣೀಲ್, ಅನಿಲ್ ಥಾಮಸ್, ಗಿರಿಧರ್, ಮಹೇಶ್ ರಾಜೇ ಅರಸ್, ಬಿ.ಎನ್.ಸಂತೋಷ್ ಕುಮಾರ್, ಪ್ರದೀಪ್ ಕುಮಾರ್ ಇನ್ನಿತರರು ಇದ್ದರು.

> ಬಿಎಲ್ ಎ ಗಳು ಕಡ್ಡಾಯವಾಗಿ ಮನೆ ಮನೆಗೆ ಹೋಗಿ ಹಂಚಬೇಕೆಂಬ ನಿಯಮ ಎಲ್ಲರಿಗೂ ಕಡ್ಡಾಯವಾಗಿದೆ. ನೀವು ಹೇಳಿದ ಬೂತ್‌ಗಳಲ್ಲಿ ನಿಯಮಬಾಹಿರವಾಗಿ ಕಂಡು ಬಂದರೆ ಅಂತಹ ಸೂಪರ್ ವೈಸರ್, ಬಿಎಲ್ ಒ ಗಳಿಗೆ ನೋಟೀಸ್ ನೀಡಲಾಗುವುದು. ಎರಡು ದಿನದ ಒಳಗೆ ಎಲ್ಲಾ ಬೂತ್‌ಗಳಲ್ಲಿ ಎಲ್ಲಾ ಪಕ್ಷದ ಬಿಎಲ್‌ಎ 2ಗಳನ್ನು ಕರೆದು ಸಭೆ ನಡೆಸಿ ಮತ ಪರಿಷ್ಕರಣೆ ವರದಿ ನೀಡುವಂತೆ ಸೂಚಿಸಲಾಗುವುದು. ಈಗ ಅರ್ಜಿ ಭರ್ತಿ ಮಾಡಿ ಪಡೆಯುವ ಕೆಲಸ ನಡೆಯುತ್ತಿದ್ದು, ಆ.5ರ ಬಳಿಕ ಅನರ್ಹರನ್ನು ಬಿಎಲ್ ಎಗಳ ಗಮನಕ್ಕೆ ತಂದೆ ತೆಗೆಯುವ ಕೆಲಸ ಮಾಡಲಾಗುವುದು. ಅಗತ್ಯ ಇರುವ ಕಡೆ ಪೊಲೀಸ್ ಭದ್ರತೆವಹಿಸಲಾಗುವುದು .
>
> **- ಲಕ್ಷ್ಮಿಕಾಂತ ರೆಡ್ಡಿ ಜಿಲ್ಲಾಧಿಕಾರಿ**

ಮಾಜಿ ಮೇಯರ್ ಮನೆಯಲ್ಲಿ ಬಿಎಲ್‌ಒಗಳು

ಮಾಜಿ ಮೇಯರ್ ಸಂದೇಶ್ ಸ್ವಾಮಿ ಮಾತನಾಡಿ ವಾರ್ಡ್ 16ರಲ್ಲಿ ಮಾಜಿ ಮೇಯರ್ ಹಾರಿಫ್ ಹುಸೇನ್ ಮನೆಗೆ ನಿತ್ಯ ಅರ್ಜಿಗಳನ್ನು ಹಿಡಿದು ಬಿಎಲ್ ಒಗಳು ಹೋಗಿ ಬರುತ್ತಾರೆ. ಆ ಭಾಗದಲ್ಲಿ ಬಿಎಲ್‌ಒಗಳಿಗೆ ಧಮ್ಕಿ ಹಾಕುವ ಪ್ರಕ್ರಿಯೆ ನಡೆಯುತ್ತಿದೆ. ವಾರ್ಡ್ ನಂ.35ರ ಉರ್ದು ಶಾಲೆಯಲ್ಲಿ ಬಿಎಲ್ 2 ಕೆಲಸ ಮಾಡುವುದು ಕಷ್ಟವಾಗುತ್ತಿದೆ. ಶಾಂತಿನಗರ, ಗೌಸಿಯಾನಗರ, ಅಜೀಜ್ ಸೇಠ್ ನಗರ ಭಾಗದಲ್ಲಿ ನಮ್ಮ ಪಕ್ಷದ ಬಿಎಲ್‌ಎ 2 ಗಳು ಹೋಗಲು ಅಸಾಧ್ಯವಾಗಿದೆ ಎಂದು ದೂರಿದರು.

CAUTION- Readers are advised to make appropriate enquiries while responding to advertisements in these columns. Anikethana Publication and Printers, does not vouch for any claims made by the advertisers. The Printer, Publisher, Editor and Owner of Anikethana Publication and Printers., shall not be held responsible/liable for any consequences, in case such claims are found to be false.

ಜುಲೈ 11 ರಂದು ರಾಷ್ಟ್ರೀಯ ಲೋಕ ಅದಾಲತ್

ಉದಯಕಾಲ ನ್ಯೂಸ್

ಮೈಸೂರು: ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ 2026ರ ಜುಲೈ 11 ರಂದು ದೇಶಾದ್ಯಂತ ರಾಷ್ಟ್ರೀಯ ಲೋಕ ಅದಾಲತ್ ಆಯೋಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸಲು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಅಗತ್ಯವಿರುವ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಮೈಸೂರು ಜಿಲ್ಲೆಯ ನ್ಯಾಯಾಲಯಗಳಲ್ಲಿ ತಮ್ಮ ಪ್ರಕರಣಗಳು ಬಾಕಿ ಇರುವ ಎಲ್ಲಾ ಪಕ್ಷಗಾರರು ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಭಾಗವಹಿಸಿ ಪರಸ್ಪರ ರಾಜಿ ಸಂಧಾನದ ಮೂಲಕ ತಮ್ಮ ವ್ಯಾಜ್ಯಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ. ಲೋಕ ಅದಾಲತ್‌ನಲ್ಲಿ ಪ್ರಕರಣ ಇತ್ಯರ್ಥವಾದರೆ ಕಾನೂನಿನ ಪ್ರಕಾರ ಪಾವತಿಸಿದ ನ್ಯಾಯಾಲಯದ ಶುಲ್ಕವನ್ನು ಮರುಪಾವತಿ ಮಾಡಲಾಗುತ್ತದೆ. ಪ್ರಕರಣವು ಅಂತಿಮವಾಗಿ ಮುಕ್ತಾಯಗೊಳ್ಳುತ್ತದೆ. 'ಲೋಕ ಅದಾಲತ್'ನ ತೀರ್ಪು ಅಂತಿಮ ಮತ್ತು ಬದ್ಧತೆಯುಳ್ಳದ್ದಾಗಿರುವುದರಿಂದ ಅದರ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸಲು ಅವಕಾಶ ಇರುವುದಿಲ್ಲ.

ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ರಾಜಿಯಾಗಬಹುದಾದ ಅಪರಾಧ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ಹಣ ವಸೂಲಾತಿ ದಾವೆಗಳು, ಮೋಟಾರು ವಾಹನ ಅಪಘಾತ ಪರಿಹಾರ ಪ್ರಕರಣಗಳು, ನೌಕರರ ಪರಿಹಾರ ಪ್ರಕರಣಗಳು, ಕಾರ್ಮಿಕ ವಿವಾದಗಳು, ವೈವಾಹಿಕ ಮತ್ತು ಕುಟುಂಬ ಸಂಬಂಧಿತ ಪ್ರಕರಣಗಳು, ಭೂಸ್ವಾಧೀನ ಪ್ರಕರಣಗಳು, ಕಂದಾಯ ಪ್ರಕರಣಗಳು, ಪಾಲು ವಿಭಾಗ ದಾವೆಗಳು, ಖಾಲಿ ಸ್ವಾಧೀನ ದಾವೆಗಳು, ನಿರ್ದಿಷ್ಟ ನಿರ್ವಹಣೆ ದಾವೆಗಳು, ಗೃಹ ಹಿಂಸಾಚಾರ ಪ್ರಕರಣಗಳು, ಜನನ ಮತ್ತು ಮರಣ ನೋಂದಣಿ ಪ್ರಕರಣಗಳು ಹಾಗೂ ಕಾನೂನಿನ ಪ್ರಕಾರ ರಾಜಿ ಮೂಲಕ ಇತ್ಯರ್ಥಪಡಿಸಬಹುದಾದ ಇತರ ನಾಗರಿಕ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುತ್ತದೆ.

ಪ್ರಸ್ತುತ ಮೈಸೂರು ಜಿಲ್ಲಾ ನ್ಯಾಯಾಲಯಗಳಲ್ಲಿ ಒಟ್ಟು 1,35,901 ಪ್ರಕರಣಗಳು ಬಾಕಿ ಇದ್ದು, ಅವುಗಳಲ್ಲಿ 24,702 ಪ್ರಕರಣಗಳು ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಇತ್ಯರ್ಥಪಡಿಸಲು ಗುರುತಿಸಲಾಗಿದೆ. ಆದ್ದರಿಂದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಎಲ್ಲಾ ಪಕ್ಷಗಾರರು, ವಕೀಲರು, ಬ್ಯಾಂಕುಗಳು, ವಿಮಾ ಸಂಸ್ಥೆಗಳು, ಸರ್ಕಾರಿ ಇಲಾಖೆಗಳು ಹಾಗೂ ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸಿ ತಮ್ಮ ಪ್ರಕರಣಗಳನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸಿಕೊಳ್ಳುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ನಾಗರಾಜ ಸಿದ್ದಪ್ಪ ಅಂಕಸದೊಡ್ಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈಜು ಚಾಂಪಿಯನ್ ಶಿಪ್ ನಲ್ಲಿ ಪನಿಶ್ಕಾಗೆ ಚಿನ್ನ

ಉದಯಕಾಲ ನ್ಯೂಸ್

ಮೈಸೂರು: ಎನ್‌ಆರ್ ಜೆ ರಾಜ್ಯ ಸಬ್-ಜೂನಿಯರ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಪನಿಶ್ಕಾ ಚಿನ್ನ ಗೆಲ್ಲುವ ಮೂಲಕ ರಾಷ್ಟ್ರೀಯ ಸ್ಪರ್ಧೆಗೆ ಆಯ್ಕೆಯಾದರು. ಮಂಗಳೂರಿನ ಯೆಮ್ಮೆಕೆರೆಯಲ್ಲಿ ನಡೆದ ಎನ್ ಆರ್‌ಜೆ ರಾಜ್ಯ ಸಬ್-ಜೂನಿಯರ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಈಜುಪಟು ಕೆ.ಪನಿಶ್ಕಾ ಅತ್ಯುತ್ತಮ ಸಾಧನೆ ಮಾಡಿ ಚಿನ್ನದ ಪದಕ ಗೆದ್ದರು. ಅಸೋಸಿಯೇಷನ್ ಆಫ್ ಇಂಟಿಗ್ರೇಟೆಡ್ ಮೈಸೂರು ಸ್ವಿಮರ್ಸ್ ಅನ್ನು ಪ್ರತಿನಿಧಿಸಿದ್ದ ಪನಿಶ್ಕಾ, ವಿಜಯನಗರದ ಮಾರ್ಲಿನ್ ಅಕ್ವಾಟಿಕ್ ಸೆಂಟರ್‌ನಲ್ಲಿ ತರಬೇತಿ ಪಡೆಯುತ್ತಿದ್ದು, ತಮ್ಮ ಚೊಚ್ಚಲ ರಾಜ್ಯ ಸಬ್-ಜೂನಿಯರ್ ಚಾಂಪಿಯನ್ ಶಿಪ್‌ನಲ್ಲೇ ಗಮನಾರ್ಹ ಪ್ರದರ್ಶನ ನೀಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. 12 ವರ್ಷದೊಳಗಿನ (ಗ್ರೂಪ್-ಡಿ) ಬಾಲಕಿಯರ ವಿಭಾಗದ 100 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಪನಿಶ್ಕಾ 1 ನಿಮಿಷ 13.55 ಸೆಕೆಂಡುಗಳಲ್ಲಿ ಗುರಿ ತಲುಪಿ ಪ್ರಥಮ ಸ್ಥಾನ ಪಡೆದು ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡರು.

ಈ ಸಾಧನೆಯೊಂದಿಗೆ ಅವರು ರಾಷ್ಟ್ರೀಯ ಸಬ್-ಜೂನಿಯರ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಅರ್ಹತೆಯನ್ನೂ ಪಡೆದಿದ್ದಾರೆ. ತರಬೇತುದಾರ ಕೆ.ಎಸ್.ಮಹೇಶ ಮಾರ್ಗದರ್ಶನ ಮತ್ತು ಪೋಷಕರ ನಿರಂತರ ಪ್ರೋತ್ಸಾಹ ಮಹತ್ವದ ಪಾತ್ರ ವಹಿಸಿದೆ.

ಪ್ರತಿದಿನ ಉದಯಕಾಲ ಓದಿರಿ

ವಿದ್ಯುತ್ ವ್ಯತ್ಯಯ

ಉದಯಕಾಲ ನ್ಯೂಸ್

ಮೈಸೂರು: 66/11 ಕೆ.ವಿ ಆಯರಹಳ್ಳಿ (ದೇವಲಾಪುರ-ಎನ್.ಜೆ.ವೈ ಫೀಡರ್) ಹಾಗೂ 220/66/11 ಕೆ.ವಿ ವಾಜಮಂಗಲ (ಹಾರೋಹಳ್ಳಿ-ಎನ್.ಜೆ.ವೈ ಫೀಡರ್) ವಿದ್ಯುತ್ ಸ್ವೀಕರಣಾ ಕೇಂದ್ರದ ವ್ಯಾಪ್ತಿಯ ಕೆಳಕಂಡ ಪ್ರದೇಶಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೆಲಸದ ನಿಮಿತ್ತ ಜುಲೈ 07 ರಂದು ಬೆಳಿಗ್ಗೆ 10:00 ರಿಂದ ಮಧ್ಯಾಹ್ನ 3:00 ಘಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ದೇವಲಾಪುರ- ಎನ್.ಜೆ.ವೈ ಫೀಡರ್ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿರುವ ಮುಖ್ಯ ಪ್ರದೇಶಗಳು: ಹಡಜನ, ಮಾರಶೆಟ್ಟಿಹಳ್ಳಿ, ಟಿ.ಎಂ ಹುಂಟಿ, ಪ್ರಶಾಂತ ಛಾಯ ಬಡಾವಣೆ, ಶ್ರೀಷಾ ಹಿಲ್‌ವ್ಯೂ ಬಡಾವಣೆ, ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾ.ವಿ.ಸ.ನಿ.ನಿ. ನ.ರಾ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಎಆರ್‌ಎಂ-I ಶಾಖೆ, 2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್, ಎಂ.ಜಿ. ರಸ್ತೆ, ಬೆಂಗಳೂರು.
ದೂ: 080-25588642

ಇ-ಹರಾಜು ಹಿಂತೆಗೆದುಕೊಳ್ಳುವಿಕೆ

ದಿನಾಂಕ: 03.07.2026 ರಂದು ಉದಯಕಾಲ ಪ್ರಕಟಣೆಯಲ್ಲಿ ಇ-ಹರಾಜು ನೋಟೀಸ್‌ನಲ್ಲಿ ಸಾಲಗಾರರು / ಅಡಮಾನದಾರರಾದ: (1) ಸ್ಕಾಟ್ಸ್ ಗಾರ್ಮೆಂಟ್ಸ್ ಲಿಮಿಟೆಡ್ & ಇತರರಿಗೆ ಸಂಬಂಧಿಸಿದ ಆಸ್ತಿಯ ಇ-ಹರಾಜು ಮಾರಾಟವು ದಿನಾಂಕ: 18.07.2026 (ಬೆಳಿಗ್ಗೆ 10.30ರಿಂದ 11.30) ಕ್ಕೆ ನಿಗಧಿಯಾಗಿದ್ದು ಅದನ್ನು ಹಿಂತೆಗೆದುಕೊಳ್ಳಲಾಗಿದೆ.

ದಿನಾಂಕ: 06.07.2026 ಸಹಿ/- ಅಧಿಕೃತ ಅಧಿಕಾರಿ
ಸ್ಥಳ: ಬೆಂಗಳೂರು ಕೆನರಾ ಬ್ಯಾಂಕ್

HOUSING FINANCE

ಐಟಿಐ ಹೌಸಿಂಗ್ ಫೈನಾನ್ಸ್ ಲಿಮಿಟೆಡ್
(ಈ ಮೊದಲು ಫಾಸ್ಟ್‌ಟ್ರ್ಯಾಕ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಆಗಿತ್ತು) CIN No. : U65993MH2005PCL158168
ನೋಂ. ಕಚೇರಿ : ಐಟಿಐ ಹೌಸ್, 36, ಡಾ. ಆರ್ ಕೆ ಶಿರೋಡ್ಕರ್ ಮಾರ್ಗ, ಪರೇಲ್ ಎಸ್ಟೇಟ್, ಮುಂಬಯಿ-400 012
ಇ-ಮೇಲ್ ಐಡಿ: comliance@fasttrackhfc.com, ವೆಬ್‌ಸೈಟ್ : www.itihousing.com

ಸ್ವಾಧೀನತೆಯ ಸೂಚನೆ (ಸ್ಥಿರ ಆಸ್ತಿಗಳಿಗೆ) [ನಿಯಮ 8(1)

ಕೆಳಸಹಿದಾರರು ಮೆ॥ ಐಟಿಐ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಈ ಮೊದಲು ಫಾಸ್ಟ್‌ಟ್ರ್ಯಾಕ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಆಗಿತ್ತು) ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಕಾಯಿದೆ 2002 ರ ಸೆಕ್ಷನ್ 13(2) ರ ನಿಯಮ 8ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರ ಅಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಾಲಗಾರರಿಗೆ ಈ ಕೆಳಗಿನ ದಿನಾಂಕದಂದು ತಗಾದೆ ಸೂಚನೆಯನ್ನು ನೀಡಿದ್ದು, ಸಾಲಗಾರರು ನೋಟೀಸಿನಲ್ಲಿ ಹೇಳಲಾದ ಮೊತ್ತವನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗಾಗಿ ಪಾವತಿಸುವಂತೆ ಸೂಚಿಸಲಾಗಿತ್ತು. ಸಾಲಗಾರರು ಮೊತ್ತವನ್ನು ಮರುಪಾವತಿಸಲು ವಿಫಲರಾಗಿದ್ದು, ಸಾಲಗಾರರು/ಜಾಮೀನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕೆಳಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13(4) ರ ನಿಯಮ 8ನ್ನು ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನ ದಿನಾಂಕದಂದು ಸ್ವಾಧೀನಪಡಿಸಿಕೊಂಡಿರುತ್ತಾರೆ. ನಿರ್ದಿಷ್ಟವಾಗಿ ಸಾಲಗಾರರು/ಜಾಮೀನುದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಯಾರೂ ಈ ಸ್ವತ್ತಿನ ಬಗ್ಗೆ ವ್ಯವಹರಿಸಕೂಡದು, ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ, ಮೆ॥ ಐಟಿಐ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಈ ಮೊದಲು ಫಾಸ್ಟ್‌ಟ್ರ್ಯಾಕ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಆಗಿತ್ತು) ನ ಚಾರ್ಜ್‌ಗೆ ಒಳಪಡುತ್ತದೆ.

ಸಾಲಗಾರರ ಹೆಸರು	ಅಡಮಾನ ಮಾಡಿದ ಆಸ್ತಿ ವಿವರ	ತಗಾದೆ ಸೂಚನೆ ದಿನಾಂಕ ಮತ್ತು 13(2) ರ ಮೊತ್ತ	ಸ್ವಾಧೀನತೆ ದಿನಾಂಕ
1. ಗುರಪ್ಪ ಎಸ್ (ಸಾಲಗಾರ & ಅಡಮಾನದಾರ) 2. ಕೃಷ್ಣಮ್ಮ (ಸಹ-ಸಾಲಗಾರ & ಅಡಮಾನದಾರ) 3. ಲೋಹಿತ್ (ಸಹ-ಸಾಲಗಾರ-1 & ಅಡಮಾನದಾರ) ಮತ್ತು 4. ಕೃಷ್ಣ (ಸಹ-ಸಾಲಗಾರ 2 & ಅಡಮಾನದಾರ) ಸಾಲ ಖಾತೆ ಸಂಖ್ಯೆ: LHKOL04322-230002815	ಸ್ಥಿರಾಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿಯ ವಿಪಿ ಖಾತಾ ನಂ. 623, ಆರ್‌ಡಿಪಿಆರ್ ನಂ. 151900204100300935, ಕಮಸಮುದ್ರ ಗ್ರಾಮ, ಕಮಸಮುದ್ರ ಹೋಬಳಿ, ಬಂಗಾರಪೇಟೆ ತಾಲೂಕು, ಕಮಸಮುದ್ರ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟಿದ್ದು, ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ : 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 40 ಅಡಿ,. ಎಲ್ಲ ಒಟ್ಟು ವಿಸ್ತೀರ್ಣ 111.48 ಚದರ ಮೀಟರ್ ಮತ್ತು ಚಕ್ಕುಬಂದಿ : ಪೂರ್ವಕ್ಕೆ : 10 ಅಡಿ ರಸ್ತೆ, ಪಶ್ಚಿಮಕ್ಕೆ : ಮುನಿಮ್ಮ ರವರ ಆಸ್ತಿ, ಉತ್ತರಕ್ಕೆ : ನಾರಾಯಣಪ್ಪ ರವರ ಆಸ್ತಿ, ದಕ್ಷಿಣಕ್ಕೆ : ಖಾಸಗಿ ಭೂಮಿ.	23.04.2026 ಮತ್ತು ರೂ.10,04,455/-	04/07/2026

ದಿನಾಂಕ : 07.07.2026, ಸ್ಥಳ: ಕರ್ನಾಟಕ ಸಹಿ/-ಅಧಿಕೃತ ಅಧಿಕಾರಿ, ಐಟಿಐ